ಕೊಳಚೆ ಪ್ರದೇಶಗಳಿಗೆ ಮೂಲಭೂತ ಸೌಕರ್ಯ

2993- ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ಕೊಳಚೆ ನಿರ್ಮೂಲನ ಮಂಡಳಿಗೆ ಸಮಾಜ ಕಲ್ಯಾಣ ಇಲಾಖೆ ಎಸ್.ಸಿ.ಪಿ.ಯಿಂದ ಎಷ್ಟು ಹಣವನ್ನು ನೀಡಿದೆ ಮತ್ತು ಯಾವ ಕಾರ್ಯಕ್ರಮ ಅನುಷ್ಠಾನಗೊಳಿಸುವಂತೆ ಸೂಚಿಸಿರುತ್ತದೆ, (ವಿವರ ನೀಡುವುದು)?*

ಆ) *ಎಸ್.ಸಿ.ಪಿ. ಮೂಲಕ ಪಡೆದ ಹಣವನ್ನು ಕೆ.ಹೆಚ್.ಬಿ. ಅಪೂರ್ಣಗೊಳಿಸಿರುವ ಮನೆಗಳನ್ನು ಪೂರ್ಣಗೊಳಿಸಲು ಬಳಸಿದರೆ ಎಸ್.ಸಿ.ಪಿ. ಹಣ ದುರ್ಬಳಕೆಯಾಗುವುದಿಲ್ಲವೆ, ಹಾಗಿದ್ದರೆ ಯಾವ ರೀತಿ ಎಸ್.ಸಿ. ಜನಾಂಗಕ್ಕೆ ಇದರಿಂದ ಪ್ರಯೋಜನವಾಗಲಿದೆ?*

ಇ) *ಎಸ್.ಸಿ.ಪಿ. ಮೂಲಕ ಪಡೆದ ಹಣವನ್ನು ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಎಲ್ಲೆಲ್ಲಿ ಬಳಸಲು ಉದ್ದೇಶಿಸಿದೆ? (ವಿವರ ನೀಡುವುದು).*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) 1996-97ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯು ವಿಶೇಷ ಘಟಕ ಯೋಜನೆಯಲ್ಲಿನ ಕ್ರೋಢೀಕೃತ ಹಣದಿಂದ 10.78 ಕೋಟಿ ರೂ.ಗಳನ್ನು ಮಂಡಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಈ ಹಣದಿಂದ ಘೋಷಿತ ಕೊಳಚೆ ಪ್ರದೇಶದ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಹೊಸ ಮನೆಗಳನ್ನು ನಿರ್ಮಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ).

ಆ) ಈ ಹಣದಿಂದ ಕರ್ನಾಟಕ ಗೃಹ ಮಂಡಳಿಯ ಅಪೂರ್ಣಗೊಂಡ ಮನೆಗಳನ್ನು ಪೂರ್ಣಗೊಳಿಸುವ ಕೆಲಸವು ಕೊಳಚೆ ನಿರ್ಮೂಲನ ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲ.

ಇ) ವಿಶೇಷ ಘಟಕ ಯೋಜನೆಯಲ್ಲಿನ ಕ್ರೋಡೀಕೃತ ಹಣದಿಂದ ಮಂಡಳಿಗೆ ಮರು ಹಂಚಿಕೆಯಾಗಿರುವ ಹಣದಲ್ಲಿ ಹೊಸ ಮನೆಗಳನ್ನು ಮಾತ್ರ ನಿರ್ಮಿಸಲು ಉದ್ದೇಶಿಸಿದ್ದು ಈ ಯೋಜನೆಗೆ ಬದಲಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಉದ್ದೇಶಗಳಿಗೆ ಬಳಸಲು ಬರುವುದಿಲ್ಲ. ವಿವರಗಳನ್ನು ಒದಗಿಸುವ ಪ್ರಮೇಯ ಉದ್ಭವಿಸುವುದಿಲ್ಲ.

ಅನುಬಂಧ

ವಿಶೇಷ ಘಟಕ ಯೋಜನೆ ಕ್ರೋಢೀಕೃತ ಹಣದಿಂದ ನಿರ್ಮಿಸಲು ಉದ್ದೇಶಿಸಿರುವ ಮನೆಗಳ ಪಟ್ಟಿ

ಕ್ರ. ಸಂ.	ಜಿಲ್ಲೆಯ ಹೆಸರು	ಮೊದಲ ಹಂತದಲ್ಲಿ ಯೋಜಿತ ಮನೆಗಳು
1.	ಬೆಂಗಳೂರು (ಗ್ರಾ)	200
2.	ಮೈಸೂರು	289
3.	ಮಂಡ್ಯ	342
4.	ಹಾಸನ	585
5.	ಧಾರವಾಡ	232
6.	ಬಿಜಾಪುರ	200
7.	ರಾಯಚೂರು	200
8.	ಕೋಲಾರ	450
9.	ಶಿವಮೊಗ್ಗ	250
10.	ಗುಲ್ಬರ್ಗ	150
11.	ತುಮಕೂರು	32
12.	ಚಿತ್ರದುರ್ಗ	100
13.	ಬಳ್ಳಾರಿ	50
	ಒಟ್ಟು	**3080**

ಮುಧೋಳ್ ಪಟ್ಟಣದಲ್ಲಿ ಲಮಾಣಿ ಜನಾಂಗದವರಿಗೆ ಮನೆ ನಿರ್ಮಿಸಲು ಭೂ ಮಂಜೂರಾತಿ

2995- ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಧೋಳ್ ಪಟ್ಟಣದಲ್ಲಿ ಸ.ನಂ. 543 ರಲ್ಲಿ ಸುಮಾರು 20 ವರ್ಷಗಳಿಂದ ಲಮಾಣಿ ಜನಾಂಗ ಮತ್ತು ಇತರೆ ಜನಾಂಗದ ಬಡವರು ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?